# ಪುರಾವೆಗಳಿಲ್ಲದೇ...

ಆ ಮೀನು ನೋಡು
ಹೇಗೆ ಈಜುತ್ತಿದೆ
ಸಾಕ್ಷಿಗಳುಳಿಸದೇ!

ಕೊಂಡಿ ಬೆಸೆದಿದ್ದಕ್ಕೆ
ಮತ್ತೆ ಕಳಚಿದ್ದಕ್ಕೆ
ಹೆಜ್ಜೆಗಳ ಗುರುತಿಲ್ಲ

ಒಸರಿದ ಕಣ್ಣೀರೂ
ಈಜಿದ ನೀರಿನೊಂದಿಗೇ ಬೆರೆತು
ಅತ್ತದ್ದು ದಾಖಲಾಗುವುದೇ ಇಲ್ಲ

ಅದರ ಹಾಡಿಗೆ
ಅದರ ಕನಸಿಗೆ ನೆನಪಿಗೆ
ಯಾವ ಪುರಾವೆಗಳೂ ಇಲ್ಲ

ಬದುಕಿದರೆ...
ಬದುಕಬೇಕು ಹೀಗೆ
ಯಾವ ಪುರಾವೆಗಳೂ ಇಲ್ಲದೇ

ಸತ್ತರೆ ಸಾಯಬೇಕು
ಗುರುತುಗಳುಳಿಸದೇ
ಯಾರ ನೆನಪಿಗೂ ಬಾರದೇ
ಯಾರನ್ನೂ ಕನಸಿನಲೂ ಕಾಡದೇ...

• **ರೂಪ ಹಾಸನ**

ಕಲೆ: ಡಿ.ಕೆ. ರಮೇಶ್

